ಎಲ್ಲಿದೆ? ಆದರೆ ಇಲ್ಲಿ ಕನ್ನಡಕ್ಕೆ ದೋಸ್ತರ ಪ್ರೀತಿಗಿಂತ ದುಶ್ಮನ್‌ಗಳ ಹಾವಳಿಯೇ ಜಾಸ್ತಿ. ಇದರ ನಿವಾರಣೆಗೆ ಏನು ಮಾಡಬೇಕು ಎಂದು ಪ್ರಶ್ನಿಸಿದರೆ, ನನ್ನ ಉತ್ತರ ಸಿದ್ಧವಾಗಿದೆ: ಏನಿಲ್ಲ....ಎಲ್ಲಾ ಕಡೆಗೆ ಜವಾರಿ ಕನ್ನಡ ಉಪಯೋಗ ಮಾಡಬೇಕು.

'ಏನ ಚಂದಂಗೆ ಕನ್ನಡ ಮಾತಾಡೂದಿದ್ರs ಮಾತಾಡ್ರಿ, ಇವ್ನ ಹೇಂತಿ, ಇಲ್ಲಾಂದ್ರ ಜಾಗಾ ಖಾಲಿ ಮಾಡ್ರಿ' ಅಂತ ರೈಟ್ ಹೇಳೂದೇ!

ಒಮ್ಮೆ ವಿಜಾಪುರದ ಸೆಂಟ್ರಲ್ ಬ್ಯಾಂಕಿಗೆ ಹೋಗಿದ್ದೆ. ಮ್ಯಾನೇಜರ್ ಹಿಂದಿಯೊಳಗ ಶುರು ಮಾಡಿದ. ನಾನು ಸಿಡಿಮಿಡಿಗೊಂಡು ಅಂದೆ, 'ಇದು ಕರನಾಟಕ ಐತಿ, ಕನ್ನಡಾ ಮಾತಾಡ್ರಿ'. ಅಂವಾ, 'ನಾ ಬೇಕಾದ್ರs ಹಿಂದಿ ಮಾತಾಡ್ತೀನಿ, ಕೇಳಿಸ್ಕೋತಿದ್ರ ಕೇಳಿಸಿಕೋರಿ, ಇಲ್ಲಾಂದ್ರs ರೈಟ್ ಹೇಳ್ರಿ' ಅಂತ ಅಂದುಬಿಡೋದೇ. ಅವನಿಗಿಂತ ಹೆಚ್ಚು ಅಲ್ಲಿ ಇದ್ದಂತಹ ಸ್ಥಳೀಯ ನೌಕರ ಹಾರಾಡಿದ, ಧಮ್ಕಿ ತೋರಿಸಿದ. ಈಗ ನಮ್ಮ ಸಿಎಂ ಹೇಳ್ತಾರ ಬ್ಯಾಂಕ್‌ನಲ್ಲಿ ವ್ಯವಹಾರ ಕಡ್ಡಾಯವಾಗಿ ಕನ್ನಡದಲ್ಲಿ ಅಂತ! ಇದು ಬರೀ ಹೇಳಿಕೆನಾ, ಇಲ್ಲಾ ಇದು ಬಾಳಿಕೆ ಬರ್ತೈತಾ ಎಂಬುದು ನನ್ನ ಪ್ರಶ್ನೆ. ಇದೂ ಕೂಡ ಸಾವಿರ ಡಾಲರಿನ ಪ್ರಶ್ನೆ! ಏನಂತಿರಿ?

ಅದಿರಲಿ, ಯಾಕಂದ್ರs ಇದರ ಸಲುವಾಗಿನೇ ಜೀವನ ಪರ್ಯಂತ ಹೋರಾಟ ಮಾಡಿದ ಹೋರಾಟಗಾರರು ಶಸ್ತ್ರತ್ಯಾಗ ಮಾಡ್ಯಾರ. ಇನ್ನೂ ಕೆಲವು 'ಉಟ್ಟು ಓರಾಟಗಾರರು' ತಾವೇ 'ಸಮೃದ್ಧ'ರಾಗ್ಯಾರ! 'ಹೋಯಂದಿಲ್ರಿ ಯಪ್ಪಾ, ನಾ ಹೇಳೂದು ಖರೇ ಐತ್ಯs ಸುಳ್ಳ ಐತ್ಯs, ಖರೋಖರ 'ಕನ್ನಡ'ದ ಮ್ಯಾಗ ಆಣಿ ಮಾಡಿ ಹೇಳ್ರಿ! ಮಾಡ್ತಿರಿ ಬಿಡ್ರಿ, ಏನರೇ ಕೆಡಕ ಆಗೂದಿತ್ತಂದ್ರ ಕನ್ನಡಕ ಆಕ್ಕತಿ, ನಮದೇನು ಗಂಟು ಹೊಕ್ಕತಿ ಅಂತೀರೇನು ಮತ್ತ?

ಇರಲಿ, ಈ ರಾಜಕೀಯದವರನ ನಂಬಿದ್ರs, ನಮ್ಮ ಕನ್ನಡ ಹಳ್ಳ ಹಿಡಿಯೂದು ಗ್ಯಾರಂಟಿ! ಈಗ ಕೆಲವೊಂದು ಸುಂದರ ಲಹರಿ ಕೇಳೂಣ ಬರ್ರಿ. ಕನ್ನಡದ ಸೊಗಸಿಗೆ ಮರಳುಗಾದವರು ಯಾರದಾರ. ಕನ್ನಡದ ಗುಂಗಿನಲ್ಲಿ ಕೇಳುವ ಮಾತುಗಳೆಲ್ಲ ಕನ್ನಡದ ಬೇನೆ ಬೇಸರಗಳ ಜೊತಿಗೇ ಬರ್ತಾವ. 'ಸುಂದರ ಸಂಜೆಗಳು ವೇದನೆಯಲಿ ರೋದಿಸುತಿವೆ' ಇದು ಒಬ್ಬ ಕವಯಿತ್ರಿಯ ಗಜಲ್ ಸಾಲು. ನಾನು ಕನ್ನಡ ಪ್ರೀತಿಯ ಗುಂಗಿನಲ್ಲಿಯೇ ಈ ಸಾಲುಗಳ ವಿಶ್ಲೇಷಣೆಗೆ ಕುಳಿತರೆ ಹೀಗನಿಸ್ತದ: ಕನ್ನಡ ಎನ್ನಡಾ ಆದರೆ, ಮತ್ತೆ ಸಂಜೆಗಳು ಸುಂದರ ಹೇಗೆ ಆಗುತ್ತವೆಯಪ್ಪಾ. ಸುಂದರ ಆಗದಿರೆ ಅವು ಹೆಂಗೆ ನಗಲು ಸಾಧ್ಯ? ಮತ್ತೇ ಅವು ರೋದಿಸದೆ ಇನ್ನೇನು ಮಾಡುತ್ತವೆ ಅಲ್ವೆ? ಹೀಗೆ ಕವಿ ವಿಚಾರ ಮಾಡುವುದರಲ್ಲಿ ಯಾವ ತಪ್ಪಿದೆ ಹೇಳಿ. 'ಮತ್ತದೇ ಬೇಸರ ಅದೇ ಸಂಜೆ ಅದೇ ಏಕಾಂತ' ಅಂತ ನಿಸಾರರು ಬಹಳ ಹಿಂದೆನೇ ಹೇಳಿದ್ದು ಇಂದಿಗೂ ಅಲ್ಲ, ಅದು ಎಂದೆಂದಿಗೂ ಸರಿನೇ ಎಂದು ನನಗೆ ಅನಿಸ್ತದ.

'ಯಾವ ಮೋಹನ ಮುರಳಿ ಕರೆಯಿತು ದೂರ ತೀರಕೆ ನಿನ್ನನು, ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು' ಎಂಬ ಸಾಲುಗಳನ್ನು ಹಾಡುಪ್ರಿಯರು ಕೇಳಿರ್ಲಿಕ್ಕೇ ಬೇಕು. ನಮ್ಮ ನವ್ಯ ಕಾವ್ಯ ಜಂಗಮ ಗೋಪಾಲಕೃಷ್ಣ ಅಡಿಗರು ಅಲೆ ಅಲೆಯ ಮೇಲೆ ಕರೆದ ಕರೆ ಇದು. ಕನ್ನಡಿಗರು ಯಾವ ಕರೆಗೆ ಓಗೊಡುತ್ತಿದ್ದಾರೋ ಗೊತ್ತಾಗದೇ ಹೋಗಿದೆ ನನಗೆ. ಕಾವ್ಯವನ್ನು ಬದಿಗಿರಿಸಿ ಗದ್ಯದತ್ತ ಮನ ಮಾಡಿದರೆ, ತೇಜಸ್ವಿ ಅವರ ಕರ್ವಾಲೋ ಕೃತಿಯ ಮಂದಣ್ಣ ನೆನಪಾಗುತ್ತಾನೆ. ಅವನು ಅಪ್ಪಟ ಕನ್ನಡಿಗ ಕಣ್ರಿ! ಅವನಷ್ಟೇ ಅಲ್ಲ, ತೇಜಸ್ವಿಯ ಎಲ್ಲ ಕೃತಿಗಳ ಪಾತ್ರಗಳು ಈ ಮಣ್ಣಿನ ಘಮದಿಂದಲೇ ಅರಳಿದ್ದಲ್ವೆ. ಲಂಕೇಶರ 'ಅವ್ವ' -ಕಪ್ಪು ಮಣ್ಣಿನ ಫಲವತ್ತತೆಯವಳು.

ಕನ್ನಡಿಗರ ಘನತೆ ಕಾಪಾಡಿದವರು ಲಂಕೇಶರು. 'ಬಂ-ಗುಂ' ಎಂದು, ಧೂಂ, ಧಾಂ ಸುಂಟರಗಾಳಿ ಎಬ್ಬಿಸಿದ ಟೀಕೆ ಟಿಪ್ಪಣಿಯ ಬರವಣಿಗೆಯ ಮಾಂತ್ರಿಕ ಲಂಕೇಶರಾಗಿದ್ದರು. ಅನಂತಮೂರ್ತಿಯವರ 'ಸಂಸ್ಕಾರ', ಚಂದ್ರಶೇಖರ ಕಂಬಾರರ 'ಜೋಕುಮಾರ ಸ್ವಾಮಿ', ಕೀರ್ತಿನಾಥ ಕುರ್ತಕೋಟಿ ಯಾನೆ 'ಕೀರ್ತಿ' ಅವರ 'ಕುಮಾರವ್ಯಾಸ'ನ ಜೊತೆಗಿನ ಅನುಸಂಧಾನ, 'ಯುಗಧರ್ಮ', ಕಾರ್ನಾಡರ 'ತುಘಲಕ'ನ ಅವಾಂತರ ಇಂದಿನ ರಾಜಕಾರ್ಯಗಳ ಪ್ರಸ್ತುತತೆ ಕನ್ನಡದ ಶ್ರೀಮಂತಿಕೆಯ ನೆನಪಾಗುವುದು. ಇವೆಲ್ಲ ಮಸುಕಾಗುತ್ತಿದ್ದರೆ ಕನ್ನಡಿಗರೇಕೆ ಸುಮ್ಮನಿದ್ದಾರೆ ಎಂದು ಮನಸ್ಸು ವ್ಯಾಕುಲವಾಗುವುದು.

* * *

ಈಗ ನಮ್ಮ ರಾಜ್ಯಕ್ಕೆ ಕರ್ನಾಟಕ ಅಂತ ಹೆಸರಾಗಿ 50 ವರ್ಷ ಕಳೆದಾಯಿತು. ಅದಕ್ಕ ಸುವರ್ಣ ಕರ್ನಾಟಕ